1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C. 98/2023

PW- 28

CW- 55

ಪ್ರ. ಬೋ. ದಿನಾಂಕಃ 31-10-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಎಸ್ ದೇವಾನಂದ |
| ತಂದೆ/ಗಂಡನ ಹೆಸರು | : | ಸೆಟ್ಟೆಪ್ಪ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಪಿಐ , ಸವಣೂರು ಪೊಲೀಸ್ ಠಾಣೆ |
| ವಾಸ | : | ಸವಣೂರು. |

ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದ.

ನಾನು ದಿ.16-01-2023 ರಿಂದ 10-05-2025ರ ವರೆಗೆ ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ಪಿಐ ಆಗಿ ಕೆಲಸ ನಿರ್ವಹಿಸಿರುತ್ತೇನೆ.

ದಿ.15-05-2023 ರಂದು ಈ ಕೇಸಿಗೆ ಸಂಬಧಪಟ್ಟಂತೆ ಈ ಕೇಸಿನ ಕಡತವನುನ ಚಾಸಾ-54 ರವರಿಂದ ಪಡೆದು ಪರಿಶೀಲಿಸಿರುತ್ತೇನೆ. ಅದೇ ದಿನ ಈ ಕೇಸಿನ ಆರೋಪಿತರನ್ನು ಪತ್ತೆ ಮಾಡಿಕೊಂಡ ಬರಲು ಸಿಬ್ಬಂದಿ ಚಾಸಾ-44 ರಿಂದ 46 ಇವರನ್ನು ನೇಮಕ ಮಾಡಿ ಜ್ಞಾಪನ ನೀಡಿರುತ್ತೇನೆ. ಆ ಪ್ರಕಾರ ಬೆಳಿಗ್ಗೆ 6-15 ಕ್ಕೆ ಸದರಿ ಸಿಬ್ಬಂದಿಗಳು ಇಬ್ಬರು ಆರೋಪಿತರನ್ನು ನನ್ನ ಮುಂದೆ ಹಾಜರುಪಡಿಸಿದರು. ಸದರಿ ಆರೋಪಿತರನ್ನು ಘಟನೆ ಬಗ್ಗೆ ವಿಚಾರಿಸಲಾಗಿ ಆರೋಪಿತರು ಘಟನೆ ಬಗ್ಗೆ ಒಪ್ಪಿಕೊಂಡಿದ್ದು, ಸದರಿ ಆರೋಪಿತರು ಕೊಟ್ಟ ಸ್ವಇಚ್ಛಾ ಹೇಳಿಕೆ ಪಡೆದಿರುತ್ತೇನೆ. ಸದರಿ ಆರೋಪಿ 1 ಮತ್ತು 2 ಇವರ ಕೊಟ್ಟ ಸ್ವಇಚ್ಛಾ ಹೇಳಿಕೆ ನೋಡುತ್ತಿದ್ದೇನೆ. ಅವುಗಳನ್ನು ನಿಪಿ.73 ಮತ್ತು 74 ಎಂದು ಗುರುತಿಸಲಾಯಿತು. ಆರೋಪಿತರ ಸಹಿ ಹಾಗು ನನ್ನ ಸಹಿಯನ್ನು ನಿಪಿ.73(ಎ, ಬಿ) , 74(ಎ,ಬಿ) ಎಂದು ಗುರುತಿಸಲಾಯಿತು.

ಅದೇ ದಿನ ಆರೋಪಿತರು ಆ ದಿನ ಹಾಕಿಕೊಂಡಿದ್ದ ಬಟ್ಟೆ ರಕ್ತದಿಂದ ಕೂಡಿದ್ದು ,

ಬಟ್ಟೆ ಜಪ್ತಿ ಪಂಚನಾಮೆ ಕುರಿತು ಠಾಣಾ ಹೆಚ್ ಸಿ 25 ರವರ ಮುಖಾಂತರ ಇಬ್ಬರು ಪಂಚರನ್ನು ಬರ ಮಾಡಿಕೊಂಡು , ಪಂಚರಾದ ಚಾಸಾ-2 ಮತ್ತು 3 ಇವರ ಸಮಕ್ಷಮ ಎರಡೂ ಬಟ್ಟೆಗಳ ಜಪ್ತಿ ಪಂಚನಾಮೆಯನ್ನು ಬೆಳಿಗ್ಗೆ 7-30 ರಿಂದ 8-20 ರ ವರೆಗೆ ಜರುಗಿಸಿ , ನಿಪಿ.20 ಮಹಜರ್ ಮಾಡಿ , ಅಮಾನತ್ತುಪಡಿಸಿಕೊಂಡಿರುತ್ತೇನೆ. ಆ ದಿನ ಆ ಸಮಯದಲ್ಲಿ ಫೋಟೋ ತೆಗೆಸಿರುತ್ತೇನೆ. ಆ ದಿನ ಮಾಡಿದ ಮಹಜರ್ ನೋಡುತ್ತಿದ್ದು , ಅರಲ್ಲಿನ ನನ್ನ ಸಹಿಯನ್ನು ನಿಪಿ.20(ಬಿ) ಎಂದು ಗುರುತಿಸಲಾಯಿತು. ಆ ದಿನ ನಿಪಿ.21 ಫೋಟೋ ತೆಗೆಯಲಾಗಿರುತ್ತದೆ. ಕೇಸರಿ ಮತ್ತು ನೀಲಿ ಬಣ್ಣದ ಶರ್ಟ್ ಅಮಾನತ್ತುಪಡಿಸಿಕೊಂಡಿದ್ದು, ಅವುಗಳನ್ನು ಮು.ಮಾ.4, 5 ಎಂದು ಈಗಾಗಲೇ ಗುರುತಿಸಲಾಗಿದೆ. ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ಸ್ವತ್ತುಪಟ್ಟಿಗೆ ಅಳವಡಿಸಿ , ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆ.

ಅದೇ ದಿನ ಆರೋಪಿತರು ನಮ್ಮನ್ನು ಕರೆದುಕೊಂಡು ಹೋದರೆ ಹಲ್ಲೆಗೆ ಬಳಸಿದ್ದ ಚಾಕುವನ್ನು ತೋರಿಸುತ್ತೇವೆ ಎಂದು ಹೇಳಿದ್ದು, ಆ ಪ್ರಕಾರ ಆರೋಪಿತರು ನಮ್ಮನ್ನು ಹರಿಹರ ಸರ್ಕಾರಿ ಆಸ್ಪತ್ರೆಯ ಎದುರು ಇರುವ ಆವರಣದ ಹತ್ತಿರ ಕರೆದುಕೊಂಡು ಹೋಗಿ, ಅಲ್ಲಿ ಆಸ್ಪತ್ರೆಯ ಮುಂಭಾಗದ ಖಾಲಿ ಜಾಗದಲ್ಲಿ ಕಾಡು ಜಾತಿ ಮರದ ಹತ್ತಿರ ಚಾಕು ಇದೆ ಎಂದು 1ನೇ ಆರೋಪಿಯು ಚಾಕು ತೋರಿಸಿ, ಹಾಜರುಪಡಿಸಿದ. ಚಾಕುವನ್ನು ನಿಪಿ.22 ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ನೋಡುತ್ತಿದ್ದು , ಅದರಲ್ಲಿ 1ನೇ ಆರೋಪಿಯ ರುಜು ನೋಡುತ್ತಿದ್ದು , ಆರೋಪಿಯ ರುಜುವನ್ನು ನಿಪಿ.22(ಬಿ) ಎಂದು ನನ್ನ ರುಜುವನ್ನು ನಿಪಿ.22(ಸಿ) ಎಂದು ಗುರುತಿಸಲಾಯಿತು. ಮಹಜರ್ ಮಾಡುವ ಸಮಯದಲ್ಲಿ ಚಾಕು ಹಾಜರುಪಡಿಸುವಾಗ ನಿಪಿ.23 ಫೋಟೋ ತೆಗೆಸಲಾಗಿದೆ. ಆ ದಿನ ಅಮಾನತ್ತುಪಡಿಸಿಕೊಂಡ ಚಾಕು ನೋಡಿದರೆ ಗುರುತಿಸುತ್ತೇನೆ. ಅದು ನ್ಯಾಯಾಲಯದ ಮುಂದೆ ಇದ್ದು , ಮು.ಮಾ.3 ಎಂದು ಈಗಾಗಲೇ ಗುರುತಿಸಲಾಗಿದೆ.

ಅದೇ ದಿನ ತಾಲ್ಲೂಕು ತಹಶೀಲದಾರರಿಗೆ ಶವ ಪಂಚನಾಮೆ ನೆರವೇರಿಸಲು ಇಬ್ಬರು ಪಂಚರನ್ನು ನೇಮಕ ಮಾಡಬೇಕೆಂದು ವಿನಂತಿಸಿಕೊಂಡಿದ್ದು, ಸದರಿ ಪತ್ರ ನೋಡುತ್ತಿದ್ದು , ನಿಪಿ.75 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಪಿ.75(ಎ) ಎಂದು ಗುರುತಿಸಲಾಯಿತು. ಆ ಪ್ರಕಾರ ಚಾಸಾ-4 ಮತ್ತು 5 ಇವರನ್ನು ಪಂಚರನ್ನಾಗಿ

ನೇಮಕ ಮಾಡಿದ ತಹಶೀಲ್ದಾರರ ಆದೇಶ ನೋಡುತ್ತಿದ್ದು , ಅದನ್ನು ನಿಪಿ.76 ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ಬಗ್ಗೆ ನನ್ನ ರುಜು ಇದ್ದು , ನನ್ನ ರುಜುವನ್ನು ನಿಪಿ.76(ಎ) ಎಂದು ಗುರುತಿಸಲಾಯಿತು. ಆ ಪ್ರಕಾರ ದಿ.15-05-2023 ರಂದು ಸದರಿ ಪಂಚರು ಠಾಣೆಗೆ ಹಾಜರಾಗಿದ್ದು, ಸದರಿ ಪಂಚರಿಗೆ ನೋಟೀಸು ಜಾರಿ ಮಾಡಿರುತ್ತೇನೆ. ನೋಟೀಸು ನೋಡುತ್ತಿದ್ದು,ಅದನ್ನು ನಿಪಿ.77 ಎಂದು ನನ್ನ ಸಹಿಯನ್ನು ನಿಪಿ.77(ಎ) ಎಂದು ಗುರುತಿಸಲಾಯಿತು.

ಬಟ್ಟೆ ಮತ್ತು ಚಾಕು ಅಮಾನತ್ತು ಕಾಲಕ್ಕೆ ಪಂಚರಾದ ಚಾಸಾ-2 ಮತ್ತು 3 ಇವರಿಗೆ ನೋಟೀಸು ಜಾರಿ ಮಾಡಿದ್ದು, ಸದರಿ ನೋಟೀಸು ನೋಡುತ್ತಿದ್ದು, ಅದನ್ನು ನಿಪಿ.78 ಎಂದು, ನನ್ನ ಸಹಿಯನ್ನು ನಿಪಿ.78(ಎ) ಎಂದು ಗುರುತಿಸಲಾಯಿತು.

ಚಾಸಾ-4 ಮತ್ತು 5 ಇವರಿಗೆ ನೋಟೀಸು ಜಾರಿ ಮಾಡಿದ ನಂತರ ಸದರಿ ಪಂಚರಿಗೆ ನಾವು ದಾವಣಗೆರೆ ಸಿಜಿ ಆಸ್ಪತ್ರೆಯ ಶವ ಗಾರದಲ್ಲಿ ಫಿರ್ಯಾದಿ ಹಾಜರಿದ್ದು, ಅವರು ಗುರುತಿಸಿ ತೋರಿಸಿದ ಶವದ ಪಂಚನಾಮೆಯನ್ನು ನಿಪಿ.24 ರಂತೆ ಜರುಗಿಸಿರುತ್ತೇನೆ. ಸದರಿ ಮಹಜರ್ ನೋಡುತ್ತಿದ್ದು, ನನ್ನ ರುಜುವನ್ನು ನಿಪಿ.24(ಬಿ) ಎಂದು ಗುರುತಿಸಲಾಯಿತು.

ಮೃತನ ಸಾವಿಗೆ ಕಾರಣ – ಆರೋಪಿತರು ಹಲ್ಲೆ ಮಾಡಿ, ಕುತ್ತಿಗೆ ಹಾಗೂ ಎದೆಗೆ ಚಾಕುವಿನಿಂದ ಚುಚ್ಚಿದ್ದರಿಂದ ತೀವ್ರ ಸ್ವರೂಪದ ಗಾಯವಾಗಿ, ಹೆಚ್ಚಿನ ಚಿಕಿತ್ಸೆಗೆ ದಾವಣಗೆರೆ ಸಿಜಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ಮಾರ್ಗ ಮಧ್ಯ ಮೃತಪಟ್ಟಿರುತ್ತಾನೆ ಎಂದು ತಿಳಿದು ಬಂದಿರುತ್ತದೆ. ಆ ಸಮಯದಲ್ಲಿ ನಿಪಿ.2 ಫೋಟೋ ತೆಗೆಯಲಾಗಿರುತ್ತದೆ. ಆ ಸಮಯದಲ್ಲಿ ಸಾಕ್ಷಿದಾರರಾದ ಚಾಸಾ-26, 27, 28, 29 ಇವರ ಹೇಳಿಕೆ ಪಡೆದಿರುತ್ತೇನೆ.

ನಂತರ ಅದೇ ದಿನ ಕೃತ್ಯ ನಡೆದ ಸ್ಥಳದ ಪಂಚನಾಮೆ ಕುರಿತು ಚಾಸಾ-4 ಮತ್ತು 5 ಪಂಚರಿಗೆ ಸದರಿ ಕೃತ್ಯ ನಡೆದ ಸ್ಥಳದ ಬಗ್ಗೆ ಮಾಹಿತಿ ನೀಡಿ, ಅವರಿಗೆ ನೋಟೀಸು ಜಾರಿ ಮಾಡಿರುತ್ತೇನೆ. ಸದರಿ ನೋಟೀಸು ನೋಡುತ್ತಿದ್ದು, ಅದನ್ನು ನಿಪಿ.79 ಎಂದು, ನನ್ನ ಸಹಿಯನ್ನು ನಿಪಿ.79(ಎ) ಎಂದು ಗುರುತಿಸಲಾಯಿತು. ಸದರಿ ಪಂಚರೊಂದಿಗೆ ಪುನಃ ಹರಿಹರ ನಗರದ ಸರ್ಕಾರಿ ಆಸ್ಪತ್ರೆಗೆ ಬಂದು , ಘಟನಾ ಸ್ಥಳದಲ್ಲಿ ನಿಪಿ.3 ಸ್ಥಳ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆ ಸಮಯದಲ್ಲಿ ಚಾಸಾ-1 ಹಾಜರಿದ್ದು , ಮಾಹಿತಿ

ನೀಡಿರುತ್ತಾರೆ. ನಿಪಿ.3 ಮಹಜರ್ ನೋಡುತ್ತಿದ್ದು, ನನ್ನ ರುಜು ನಿಪಿ.3(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ.4 ಕಚ್ಚಾ ನಕಾಶೆ ತೆಗೆದಿದ್ದು , ಅದರಲ್ಲಿ ನನ್ನ ರುಜು ಇದ್ದು, ರುಜುವನ್ನು ನಿಪಿ.4(ಸಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ನಿಪಿ.5 ಮತ್ತು 6 ಫೋಟೋ ತೆಗೆಯಲಾಯಿತು. ಮಹಜರ್ ಸಮಯದಲ್ಲಿ ಡಿ ದರ್ಜೆ ನೌಕರರಾದ ಬಸವರಾಜ್ ಈತನು ಚಪ್ಪಲಿ ಹಾಜರುಪಡಿಸಿದ್ದು, ಸದರಿ ಚಪ್ಪಲಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಚಪ್ಪಲಿ ನೋಡಿದರೆ ಗುರುತಿಸುತ್ತೇನೆ. ಅವು ನ್ಯಾಯಾಲಯದ ಮುಂದೆ ಇದ್ದು , ಮು.ಮಾ.1 ಎಂದು ಈಗಾಗಲೇ ಗುರುತಿಸಲಾಗಿದೆ ಸದರಿ ಮು.ಮಾ.1 ನ್ನು ಪಿಎಫ್ ಗೆ ಅಳವಡಿಸಿರುತ್ತೇನೆ.

ಅದೇ ದಿನ ಅಂಬುಲನ್ಸ ಚಾಲಕನ ಹೆಸರು ಮತ್ತು ವಿಳಾಸವನ್ನು ನೀಡುವಂತೆ ವೈದ್ಯರಿಗೆ ಮನವಿ ಸಲ್ಲಿಸಿರುತ್ತೇನೆ. ಆ ಪ್ರಕಾರ ವೈದ್ಯಾಧಿಕಾರಿಗಳು - ನಾಗರಾಜ್ ಬುಳ್ಳಾಪುರ ಅಂತಾ ನೌಕರರ ಹೆಸರು ನೀಡಿದ್ದು, ಸದರಿಯವರು ನೀಡಿದ ಪತ್ರ ನೋಡುತ್ತಿದ್ದು, ಅದನ್ನು ನಿಪಿ.80 ಎಂದು ಗುರುತಿಸಲಾಯಿತು.

ನಂತರ ಆರೋಪಿತರು ಮುಂದಿನ ತನಿಖೆಗೆ ಅವಶ್ಯವಿಲ್ಲದ್ದರಿಂದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ , ರಿಮಾಂಡ್ ಅರ್ಜಿಯೋಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

ದಿ.16-05-2023 ರಂದು ಫಿರ್ಯಾದಿಯ ಮನೆ ಹತ್ತಿ ನಡೆದ ಜಗಳದ ಬಗ್ಗೆ ಚಾಸಾ-1 ಫಿರ್ಯಾದಿ ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-6 ಮತ್ತು 7 ಇವರನ್ನು ನೋಟೀಸು ಕೊಟ್ಟಿ ಸ್ಥಳಕ್ಕೆ ಕರೆಸಿ , ಅವರ ಸಮಕ್ಷಮ ಸ್ಥಳ ಮಹಜರ್ ಜರುಗಿಸಿರುತ್ತೇನೆ. ಪಂಚರಿಗೆ ಕೊಟ್ಟ ನೋಟೀಸು ನೋಡುತ್ತಿದ್ದು, ಅದನ್ನು ನಿಪಿ.81 ಎಂದು ಗುರುತಿಸಲಾಯಿತು. ಫಿರ್ಯಾದಿ ತೋರಿಸಿದ ಸ್ಥಳದಲ್ಲಿ ನಿಪಿ.7 ರಂತೆ ಸ್ಥಳ ಮಹಜರ್ ತಯಾರಿಸಿರುತ್ತೇನೆ. ಸದರಿ ಮಹಜರ್ ನೋಡುತ್ತಿದ್ದು, ಅದರಲ್ಲಿ ನನ್ನ ರುಜು ಇದ್ದು, ರುಜುವನ್ನು ನಿಪಿ.7(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ.8 ಕಚ್ಚಾ ನಕಾಶೆ ತಯಾರು ಮಾಡಿದ್ದು , ನನ್ನ ರುಜು ನಿಪಿ.8(ಸಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ನಿಪಿ.9 ಮತ್ತು 10 ರಂತೆ ಫೋಟೋ ತೆಗೆಸಿರುತ್ತೇನೆ. ಮಹಜರ್ ಮಾಡುವ ಸಮಯದಲ್ಲಿ ಚಾಸಾ-1 ಇವರು ಆರೋಪಿತರು ನನ್ನ ಗಂಡನಿಗೆ ಹೊಡೆದ ಸಿಮೆಂಟ್ ಕಲ್ಲನ್ನು ಹಾಜರುಪಡಿಸಿದ್ಧು ಅದನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ, ಸದರಿ

ಸಿಮೆಂಟ್ ಕಲ್ಲು ನ್ಯಾಯಾಲಯದ ಮುಂದೆ ಇದ್ದು, ಅದನ್ನು ಈಗಾಗಲೇ ಮು.ಮಾ.2 ಎಂದು ಈಗಾಗಲೇ ಗುರುತಿಸಲಾಗಿದೆ ಸದರಿ ಮುದ್ದೆ ಮಾಲನ್ನು ಸ್ವತ್ತು ಪಟ್ಟಿಗೆ ಅಳವಡಿಸಲಾಯಿತು. ಅದೇ ದಿನ ಠಾಣಾ ಹೆಚ್.ಸಿ.ಮಂಜುನಾಥ ಇವರು ಆರೋಪಿತರನ್ನು ಕರೆದುಕೊಂಡು ಬಂದು ಹಾಜರುಪಡಿಸಿದ ಬಗ್ಗೆ ವರದಿ ನೀಡಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-12, 13, 14, 15, 24, 25, 26, 27, 43, 44, 45, 46 ಮತ್ತು 50 ರವರ ಹೇಳಿಕೆ ಪಡೆದಿರುತ್ತೇನೆ.

ದಿ.17-05-2023 ರಂದು ದಾವಣಗೆರೆ ಸಿಜಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಗಾಯಾಳುವಿನ ಗಾಯದ ಪ್ರಮಾಣಪತ್ರ ನೀಡುವಂತೆ ಮನವಿ ಪತ್ರ ನೀಡಿರುತ್ತೇನೆ. ಸದರಿ ಮನವಿಪತ್ರ ನೋಡುತ್ತಿದ್ದು , ನಿಪಿ.36 ಎಂದು ಈಗಾಗಲೇ ಗುರುತಿಸಲಾಗಿದೆ. ನನ್ನ ರುಜುವನ್ನು ನಿಪಿ.36(ಎ) ಎಂದು ಗುರುತಿಸಲಾಯಿತು. ಗಾಯಾಳು ಫಕ್ಕಿರಪ್ಪ ಈತನ ನಿಪಿ.61 ಗಾಯದ ಪ್ರಮಾಣಪತ್ರ ಸ್ವೀಕರಿಸಿದ್ದು , ಅದರಲ್ಲಿ ನನ್ನ ರುಜು ಇದ್ದು, ರುಜುವನ್ನು ನಿಪಿ.61(ಬಿ) ಎಂದು ಗುರುತಿಸಲಾಯಿತು. ದಿ.17-05-2023 ರಂದು ಮೃತ ಕುಮಾರ್ ಮತ್ತು ಗಾಯಾಳು ಫಕ್ಕಿರಪ್ಪ ಇವರ ಎಂ ಎಲ್ ಸಿ ದೃಢೀಕೃತ ನಕಲು ನೀಡುವಂತೆ ಕೋರಿ , ಹರಿಹರ ಸರ್ಕಾರಿ ವೈದ್ಯಾಧಿಕಾರಿಗಳಿಗೆ ಮನವಿ ಪತ್ರ ನೀಡಿರುತ್ತೇನೆ. ಸದರಿ ಮನವಿ ಪತ್ರ ನೋಡುತ್ತಿದ್ಧು, ಅದನ್ನು ನಿಪಿ.82 ಎಂದು, ನನ್ನ ಸಹಿಯನ್ನು ನಿಪಿ.82(ಎ) ಎಂದು ಗುರುತಿಸಲಾಯಿತು.

ಅದೇ ದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರಿಗೆ ಘಟನಾ ಸ್ಥಳ ಹಾಗೂ ಆಸ್ಪತ್ರೆಯ ಪಕ್ಕದ ಸ್ಥಳದ ಬಗ್ಗೆ ನಕ್ಷೆ ತಯಾರು ಮಾಡಿಕೊಡುವಂತೆ ಮನವಿ ಪತ್ರ ನೀಡಿರುತ್ತೇನೆ. ಸದರಿ ಮನವಿ ಪತ್ರ ನೋಡುತ್ತಿದ್ದು, ನಿಪಿ.53 ಎಂದು ಈಗಾಗಲೇ ಗುರುತಿಸಲಾಗಿದೆ. ಆ ಪ್ರಕಾರ ಸದರಿ ಅಧಿಕಾರಿಗಳು ಸರ್ವೆ ನಂ.81/23 ರಲ್ಲಿ ನಿಪಿ.47 ಸ್ಥಳದ ನಕ್ಷೆ ಹಾಗೂ ಆಸ್ಪತ್ರೆಯ ತುರ್ತು ಘಟಕದ ಸ್ಥಳದ ನಿಪಿ.55 ನಕ್ಷೆಯನ್ನು ನಕ್ಷೆ ತಯಾರು ಮಾಡಿದ್ದನ್ನು ಪತ್ರದೊಂದಿಗೆ ಕಳುಹಿಸಿರುತ್ತಾರೆ.

ಅದೇ ದಿನ ಕೃತ್ಯ ನಡೆಯುವ ಸಮಯದಲ್ಲಿ ಕರ್ತವ್ಯದಲ್ಲಿರುವ ಸಿಬ್ಬಂದಿಗಳ ದೃಢೀಕರಣ ಪತ್ರ ನೀಡಬೇಕೆಂದು ವೈದ್ಯರಿಗೆ ನಿಪಿ.34 ಮನವಿ ಪತ್ರ ಕಳುಹಿಸಿರುತ್ತೇನೆ. ಅದೇ ದಿನ ಸರ್ಕಾರಿ ಆಸ್ಪತ್ರೆಯಲ್ಲಿ ವಿದ್ಯುತ್ ಸಂಪರ್ಕ ಇದೆಯೋ ಇಲ್ಲವೋ ಎಂದು

ಮಾಹಿತಿ ನೀಡಲು ಕೆ ಇ ಬಿ ಅಧಿಕಾರಿಗಳಿಗೆ ನಿಪಿ.49 ಮನವಿ ಪತ್ರ ಕಳುಹಿಸಿರುತ್ತೇನೆ. ಅದೇ ದಿನ ಸರ್ಕಾರಿ ಆಸ್ಪತ್ರೆಯ ಖಾತಾ ಉತಾರ ನೀಡುವಂತೆ ಪೌರಾಯುಕ್ತರು, ನಗರ ಸಭೆ ಹರಿಹರ ಇವರಿಗೆ ಮನವಿ ಸಲ್ಲಿಸಿರುತ್ತೇನೆ. ಸದರಿ ಅಧಿಕಾರಿಗಳು ಸದರಿ ದಾಖಲಾತಿ ಲಭ್ಯವಿಲ್ಲ ಎಂದು ತಿಳಿಸಿರುತ್ತಾರೆ. ನಂತರ ನಾನು ಪುನಃ ಹರಿಹರ ಸರ್ಕಾರಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಇವರಿಗೆ ಆಸ್ಪತ್ರೆಯ ಖಾತಾ ಉತಾರ ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ, ಅದನ್ನು ನೋಡುತ್ತಿದ್ದು , ನಿಪಿ.83 ಎಂದು ಗುರುತಿಸಲಾಯಿತು.

ಅದೇ ದಿನ ಹರಿಹರ ಸರ್ಕಾರಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಇವರಿಗೆ ಆಸ್ಪತ್ರೆಯ ಸಿಸಿ ಕ್ಯಾಮರಾ ಫೋಟೇಜ್ ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ, ಅದನ್ನು ನೋಡುತ್ತಿದ್ದು, ನಿಪಿ.45 ಎಂದು ಗುರುತಿಸಲಾಗಿದೆ.

ದಿ.22-05-2023 ರಂದು ಸದರಿ ಪ್ರಕರಣದಲ್ಲಿ ಭಾರತೀಯ ದಂಡ ಸಂಹಿತೆ ಕಲಂ.307 ನ್ನು ಅಳವಡಿಸಲು ಮಾನ್ಯ ನ್ಯಾಯಾಲಯಕ್ಕೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಸದರಿ ಮನವಿ ಪತ್ರ ನೋಡುತ್ತಿದ್ದು, ನಿಪಿ.84 ಎಂದು ಗುರುತಿಸಲಾಯಿತು. ಅದೇ ದಿನ ನೊಂದ ವ್ಯಕ್ತಿಗಳ ಸಿಆರ್ಪಿಸಿ ಕಲಂ.164 ರ ಅಡಿಯಲ್ಲಿ ಹೇಳಿಕೆ ಮಾಡಿ ನಕಲು ನೀಡಲು ಕೋರಿಕೆ ಪತ್ರ ನೀಡಿರುತ್ತೇನೆ. ಸದರಿ ಪತ್ರ ನೋಡುತ್ತಿದ್ದು, ನಿಪಿ.85 ಎಂದು ಗುರುತಿಸಲಾಯಿತು. ಅದೇ ದಿನ ಬೆಸ್ಕಾಂ ಇವರು ಘಟನೆಯ ದಿನ ಆಸ್ಪತ್ರೆಗೆ ವಿದ್ಯುತ್ ಸರಬರಾಜು ಇದ್ದ ಬಗ್ಗೆ ನಿಪಿ.50, 51 ಮತ್ತು 52 ದಾಖಲೆ ಹಾಜರುಪಡಿಸಿರುತ್ತಾರೆ.

ದಿ.23-05-2023 ರಂದು ಹರಿಹರ ಸರ್ಕಾರಿ ಆಸ್ಪತ್ರೆಯ ವೈದ್ಯರಾದ ಡಾ. ಸವಿತಾ ಇವರು 9 ಪುಟಗಳನ್ನು ಲಗತ್ತಿಸಿ ನೀಡಿದ ಪತ್ರ ಪಡೆದು, ಕಡತಕ್ಕೆ ಅಳವಡಿಸಿರುತ್ತೇನೆ. ಅವುಗಳನ್ನು ನಿಪಿ58 ರಿಂದ 63 ಎಂದು ಈಗಾಗಲೇ ಗುರುತಿಸಲಾಗಿದೆ.

ದಿ.25-05-2023 ರಂದು ತನಿಖೆ ಮುಂದುವರೆಸಿ, ಸರ್ಕಾರಿ ಆಸ್ಪತ್ರೆಯ ಡಿವಿಆರ್ ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ಪಂಚರಾದ ಚಾಸಾ-8 ಮತ್ತು 9 ಇವರಿಗೆ ನಿಪಿ.25 ನೋಟೀಸ ನೀಡಿರುತ್ತೇನೆ . ಆ ಪ್ರಕಾರ ಡಿವಿಆರ್ ಅಮಾನತ್ತು ಮಹಜರ್ ನಿಪಿ.26 ಮಾಡಿ , ಸದರಿ ಮಹಜರ್ ನೋಡುತ್ತಿದ್ದು , ಅದರಲ್ಲಿ ನನ್ನ ರ ುಜು ಇದ್ದು ನಿಪಿ26(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ.27 , 28 ಫೋಟೋ ತೆಗೆಸಿ ನಿಪಿ.29 ಡಿವಿಆರ್ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಡಿವಿಆರಿ

ನಿಂದ ಯಾವುದೇ ಮಾಹಿತಿ ಸಿಗಲಿಲ್ಲ. ಸದರಿ ಡಿವಿಆರ್ ನ್ಯಾಯಾಲಯದ ಮುಂದೆ ಇದ್ದು , ಅದನ್ನು ಮು.ಮಾ.6 ಎಂದು ಈಗಾಗಲೇ ಗುರುತಿಸಲಾಗಿದೆ.

ಅದೇ ದಿನ ಆರೋಪಿಯ ಸಂಬಂಧಿ ಚಾಸಾ-31 ಮಹಾದೇವಪ್ಪ ಇವರಿಗೆ ಆರೋಪಿತರು ಕೃತ್ಯಕ್ಕೆ ಬಳಸಿದ್ದ ವಾಹನ ಹಾಜರುಪಡಿಸುವಂತೆ ನೋಟೀಸು ನೀಡಿದ್ದು , ಆ ಪ್ರಕಾರ ಸದರಿ ಬೈಕನ್ನು ಠಾಣೆಗೆ ಹಾಜರುಪಡಿಸಿದ್ದು, ಸದರಿ ಬೈಕನ್ನು ಅಮಾನತ್ತು ಪಡಿಸಿಕೊಳ್ಳಲು ಮಹಜರ್ ಸಾಕ್ಷಿಗಳಾದ ಚಾಸಾ-10 ಮತ್ತು 11 ಇವರಿಗೆ ನಿಪಿ.86 ನೋಟೀಸು ಜಾರಿ ಮಾಡಿದ್ದು , ಆ ಪ್ರಕಾರ ಅವರು ಠಾಣೆಗೆ ಹಾಜರಾಗಿದ್ದು , ಆಗ ಠಾಣೆಯಲ್ಲಿ ಚಾಸಾ-31 ಇವರು ಹಾಜರುಪಡಿಸಿದ ಬೈಕನ್ನು ನಿಪಿ.31 ರಂತೆ ಮಹಜರ್ ಮಾಡಿ , ಅಮಾನತ್ತುಪಡಿಸಿಕೊಂಡಿದ್ದು , ಸದರಿ ಮಹಜರ್ ನೋಡುತ್ತಿದ್ಧು, ಅದರಲ್ಲಿನ ನನ್ನ ಸಹಿಯನ್ನು ನಿಪಿ.31(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ.30 ಫೋಟೋ ತೆಗೆದಿದ್ದು , ಅದರಲ್ಲಿ ಕಾಣುತ್ತಿರುವ ಬೈಕ್ ಅಮಾನತ್ತುಪಡಿಸಿಕೊಂಡ ಬೈಕ್ ಆಗಿರುತ್ತದೆ. ಅದನ್ನು ಸ್ವತ್ತು ಪಟ್ಟಿಗೆ ಅಳವಡಿಸಿರುತ್ತೇನೆ.

ಅದೇ ದಿನ ಸಾಕ್ಷಿದಾರರಾದ ಚಾಸಾ-14, 16, 17,18, 19, 20, 21, 22, 23, 30, 31, 47, 48, 49, 50 ರವರ ಹೇಳಿಕೆ ಪಡೆದಿರುತ್ತೇನೆ.

ದಿ.25-05-2023 ರಂದು ಸಿಆರ್ ಪಿ ಸಿ 164ರ ಅಡಿಯಲ್ಲಿ ಅರ್ಜಿಯಲ್ಲಿ ನಮೂದಿಸಿದ ವ್ಯಕ್ತಿಗಳ ಹೇಳಿಕೆ ಪಡೆಯುವ ಬಗ್ಗೆ ಪತ್ರ ಬರೆದಿದ್ದು, ಸದರಿ ಪತ್ರ ನೋಡುತ್ತಿದ್ದು , ನಿಪಿ.87 ಎಂದು ಗುರುತಿಸಲಾಯಿತು. ಡಾ. ಸವಿತಾ ಇವರು ಕೊಟ್ಟ ಹೇಳಿಕೆಯನ್ನು ನಿಪಿ.11 ಎಂದು ಮತ್ತು ವೀರೇಂದ್ರ ಪಾಟೀಲ್ ಇವರ ಹೇಳಿಕೆಯನ್ನು ನಿಪಿ.19 ಎಂದು ಈಗಾಲೇ ಗೂುತಿಸಲಾಗಿದೆ. ಹಾಗೂ ದೀಪಾ, ಹರಿಹಶ್, ಪದ್ಮಜಾ, ಕೆ.ಟಿ.ಸುಮಂಗಳಾ, ಶ್ವೇತಾ, ಅನುಸುಯಮ್ಮ ಇವರ ಹೇಳಿಕೆ ಪಡೆದಿರುತ್ತೇನೆ. ಸದರಿ ಹೇಳಿಕೆಗಳನ್ನು ನಿಪಿ.88, 89, 90, 91, 92 ಮತ್ತು 93 ಎಂದು ಗುರುತಿಸಲಾಯಿತು.

ದಿ.26-05-2023 ರಂದು ಆರೋಪಿತರ ರಕ್ತದ ವರ್ಗೀಕರಣ ಪಡೆಯಲು ಆರೋಪಿತರನ್ನು ಪೊಲೀಸ್ ಅಭಿರಕ್ಷೆಗೆ ನೀಡುವಂತೆ ವಿನಂತಿಸಿಕೊಂಡಿದ್ದು, ಆ ಪ್ರಕಾರ ನ್ಯಾಯಾಲಯ ಅನುಮತಿ ನೀಡಿದ್ದು, ದಿ.27-05-2023 ರಂದು ಸರ್ಕಾರಿ ಆಸ್ಪತ್ರೆ ಗೆ ಆರೋಪಿತರನ್ನು ಹಾಜರುಪಡಿಸಿ , ಮಾದರಿ ರಕ್ತ ಪಡೆದು, ನಂತರ ಆರೋಪಿತರು

ನ್ಯಾಯಾಲಯದ ಮುಂದೆ ಹಾಜರುಪಡಿಸಿ , ನ್ಯಾಯಾಂಗ ಬಂಧನಕ್ಕೆ ನೀಡುವಂತೆ ವಿನಂತಿಸಿರುತ್ತೇನೆ.

ದಿ.30-05-2023 ರಂದು ಫಕ್ಕಿರಪ್ಪ ಮತ್ತು ಬಸವರಾಜ್ ಇವರ ಸಿಆರ್‌ಪಿಸಿ.164 ಹೇಳಿಕೆ ಪಡೆಯಲು ಮನವಿ ಪತ್ರ ಸಲ್ಲಿಸಿ ದ್ದು , ಪಕ್ಕಿರಪ್ಪ ಇವರಿಗೆ ಸಂಬಂದಿಸಿದ ಮನವಿತ್ರ ನೋಡುತ್ತಿದ್ದು , ಅದನ್ನು ನಿಪಿ.85 ಎಂದು ಈಗಾಗಲೇ ಗುರುತಿಸಲಾಗಿದೆ, ಬಸವರಾಜಪ್ಪ ಇವರಿಗೆ ಸಂಬಧಪಟ್ಟ ಮನವಿ ಪತ್ರ ನೋಡುತಿತದ್ದು, ಅದನ್ನು ನಿಪಿ.94 ಎಂದು ಗುರುತಿಸಲಾಯಿತು. ನಂತರ ಸದರಿಯವರ ಹೇಳಿಕೆ ಪಡೆದಿದ್ದು, ಅವುಗಳನ್ನು ನೋಡುತ್ತಿದ್ದು , ನಿಪಿ.95 ಮತ್ತು 96 ಎಂದು ಗುರುತಿಸಲಾಯಿತು.

ದಿ.02-06-2023 ರಂದು ಸಿವಿಲ್ ನ್ಯಾಯಾಲಯ, ಹರಿಹರಕ್ಕೆ ಆರೋಪಿ ಮತ್ತು ಫಿರ್ಯಾದಿದಾರರಿಗೆ ಮನೆ ಆಸ್ತಿಗೆ ಸಂಬಂಧಪಟ್ಟ ವಿವಾದ ಇದ್ದು, ದಾಖಲೆ ನೀಡುವಂತೆ ಕೇಳಿಕೊಂಡಿರುತ್ತೇನೆ. ಅ ಪ್ರಕಾರ ನ್ಯಾಯಾಲಯದಿಂದ ಅಸಲು ದಾವಾ ನಂ.87/19 ಕ್ಕೆ ಸಂಬಂಧಪಟ್ಟ ವಾದ ಪತ್ರ , ಮಧ್ಯಂತರ ಅರ್ಜಿ, ಸಾಕ್ಷಿದಾರರ ಹೇಳಿಕೆ , ದಾಖಲಾತಿಗಳು, ಕ್ರಯಪತ್ರ , ಆದೇಶದ ಹಾಳೆ , ಮಧ್ಯಂತರ ಅರ್ಜಿ2 ರ ಮೇಲೆ ಆದೇಶ, ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡಿದ್ದು, ಸದರಿ ಎಲ್ಲಾ ದಾಖಲೆಗಳನ್ನು ಒಟ್ಟಾಗಿ ನಿಪಿ.97 ಎಂದು ಗುರುತಿಸಲಾಯಿತು.

ದಿ.06-06-2023 ರಂದು ಸರ್ಕಾರಿ ಆಸ್ಪತ್ರೆಯ ಖಾತಾ ಉತಾರ ನೀಡುವಂತೆ ಹರಿಹರ ಸರ್ಕಾರಿ ಆಸ್ಪತೆರಯ ಆಡಳಿತಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು , ಆ ಪ್ರಕಾರ ಸದರಿಯವರು ನಿಪಿ.38 ರಂತೆ ಪತ್ರ ಬರೆದು , ನಂತರ ನಿಪಿ.39 ರಿಂದ 44 ಪಹಣಿ ಪತ್ರಿಕೆ ಹಾಜರುಪಡಿಸಿರುತ್ತಾರೆ.

ದಿ.15-06-2023 ರಂದು ಅಂಬುಲನ್ಸ ಚಾಲಕ ನಾಗರಾಜ್ ಬುಳ್ಳಾಪುರ ಇವರ ಕರ್ತವ್ಯ ಧೃಡಿಕರಣ ಪತ್ರ ನೀಡಬೇಕೆಂದು ಮನವಿ ಸಲ್ಲಿಸಿದ್ದು, ಆ ಪರಕಾರ ಸದರಿ ವೈದ್ಯರು ಸದರಿ ವ್ಯಕ್ತಿಗೆ ಸಂಬಧಪಟ್ಟಂತೆ ನಿಪಿ.80 ದಾಖಲೆ ಪೂರೈಸಿದ್ದು, ನಂತರ ಸದರಿ ವ್ಯಕ್ತಿಯನ್ನು ವಿಚಾರ ಮಾಡಿ ಹೇಳಿಕೆ ಪಡೆದಿರುತ್ತೇನೆ.

ದಿ.17-06-2023 ರಂದು ಹರಿಹರ ಪಿಡಬ್ಲೂಡಿ ಅಭಿಯಂತರರು , ಘಟನಾ ಸ್ಥಳ , ಆಸ್ಪತ್ರೆಯ ಎದುರಿನ ಸ್ಥ,ಳ ಮತ್ತು ಪ್ರಶಾಂತ್ ನಗರದ ಮೃತನ ಮನೆಯ ಮುಂದೆ ಇರಮ ಕೃತ್ಯ ನಡೆದ ಸ್ಥಳಗಳ ನಕಾಶೆ ನೀಡಿದ್ದು , ಅವುಗಳನ್ನು ಕಡತಕ್ಕೆ ಅಳವಡಿಸಿರುತ್ತೇನೆ. ಅದೇ ಪ್ರಕಾರ ಫಕ್ಕಿರಪ್ಪ ಇವರ ಗಾಯಪ್ರಮಾಣಪತ್ರ ಪಡೆದಿದ್ದು ,ಕಡತಕ್ಕೆ ಅಳವಡಿಸಿರುತ್ತೇನೆ.

ದಿ.22-06-2023 ರಂದು ನಿಪಿ.63 ಎಫ್.ಎಸ್.ಎಲ್ ವರದಿ ಪಡೆದುಕೊಂಡಿರುತ್ತೇನೆ. ದಿ.27-06-2023 ರಂದು ರತ್ನಮ್ಮ ಗಂಡ ಗುಡಪ್ಪ ಇವರ ಮನೆಯ ಉತಾರ ನೀಡುವಂತೆ ಪೌರಾಯುಕ್ತರಿಗೆ ನಿಪಿ.71 ಮನವಿ ಸಲ್ಲಿಸಿರುತ್ತೇನೆ. ಆ ಪ್ರಕಾರ ಪೌರಾಯುಕ್ತರು ದಿ.30-06-2023 ರಂದು ನಿಪಿ.72 ಮನೆಗೆ ಸಂಬಧಪಟ್ಟ ನಂಬರ್ ಬಗ್ಗೆ ಉತಾರ ಕೊಟ್ಟಿರುತ್ತಾರೆ. ದಿ.29-06-2023 ರಂದು ಸಾಕ್ಷಿದಾರರಾದ ಚಾಸಾ-51, 52 ಇವರ ಹೇಳಿಕೆ ಪಡೆದಿರುತ್ತೇನೆ.

ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು , ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ.

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.